# ಕಣ್ಣೆದುರಿಗೇ ಕಣ್ಮರೆಯಾದ ಜೀವಿಗಳು


ಸದ್ದಿಲ್ಲದೆ ಮರೆಯಾದ ಜೂಲಾನೆ

ಏಯ್! ಇದೆಂಥ ಆನೆ? ಮೈಯೆಲ್ಲ ಜೂಲು ಎಂದು ಅಚ್ಚರಿ ಪಡಬಹುದು. ಆದರೆ ನೋಡುವ ಅವಕಾಶವೇ ಇಲ್ಲ. ಅಸ್ಥಿಪಂಜರ ನೋಡಬಹುದು, ಮ್ಯೂಸಿಯಂಗಳಲ್ಲಿ. ಆಫ್ರಿಕಾದ ಗಂಡಾನೆಗಿಂತ ದಢೂತಿ, ಆರು ಟನ್ನು ತೂಕ. ಬಾಳಿದ್ದು ಹಿಮಯುಗದಲ್ಲಿ – 11,000 ವರ್ಷಗಳ ಹಿಂದೆ. ಹೆಚ್ಚಿನ ಪಾಲು ಸೈಬೀರಿಯಾದ ಸುತ್ತ ಮುತ್ತ. ಇದನ್ನು ಬೇಟೆಯಾಡಿ ಕೊಲ್ಲಲು ಮನುಷ್ಯ ಭರ್ಜಿ ಬಳಸಿದ, ಈಟಿ ಬಳಸಿದ. ಅವುಗಳ ಮೂಳೆಯನ್ನು, ದಂತವನ್ನು ಬಳಸಿ ಆಯುಧ ಮಾಡಿದ; ಬೇರೆ ಪ್ರಾಣಿಗಳನ್ನು ಕೊಲ್ಲಲು. ನೋಡ ನೋಡುತ್ತಲೇ ಸಂತತಿಯನ್ನೇ ಕೊಂದ. ಭೂಮಿಯಿಂದ ಶಾಶ್ವತವಾಗಿ ಗಡಿ ಪಾರಾಯಿತು. ಮತ್ತೆ ನೋಡಬೇಕೆಂದರೆ 'ಜ್ಯುರಾಸಿಕ್ ಪಾರ್ಕ್' ತರಹ ಸಿನಿಮಾ ತೆಗೆಯಬೇಕು.

ಆಸ್ಟ್ರೇಲಿಯಾದ ತಾಸ್ಮೇನಿಯಾದ ಸುತ್ತಮುತ್ತ ಕಾಂಗರೂಗಳನ್ನು ಬೆನ್ನಟ್ಟಿ ಹೋಗುತ್ತಿದ್ದ ಈ ಪ್ರಾಣಿ ನಿಜವಾಗಲೂ ಹುಲಿಯಲ್ಲ; ತೋಳ. ಪಟ್ಟೆ ಬಳಿದಂತೆ ದೇಹ, ನಾಯಿಯ ತಲೆಗಿಂತ ಚಿಕ್ಕ ಬುರುಡೆ. ಮರಿಗಳನ್ನು ರಕ್ಷಿಸಿಟ್ಟುಕೊಳ್ಳಲು ಚೀಲ. ಎರಡು ಸಾವಿರ ವರ್ಷಗಳ ಹಿಂದೆಯೇ ಇವುಗಳನ್ನು ಭೂಮಿಯಿಂದ ಆಚೆಗೆ ಅಟ್ಟಿಯಾಯಿತು. ಒಂದೆಡೆ ಡಿಂಗೋ ನಾಯಿಗಳು, ಮತ್ತೊಂದೆಡೆ ಬುಡಕಟ್ಟಿನವರು ತಾಸ್ಮೇನಿಯಾ ಹುಲಿಗೆ ಕಂಟಕವಾದರು. 1830ರಲ್ಲಿ ನ್ಯೂಸೌತ್ ವೇಲ್ಸ್ ಸುತ್ತ ಇವು ಓಡಾಡಿದ್ದು ಕಂಡಿತು ಎಂದವರಿದ್ದಾರೆ.

ಸರಿ, ಈ ಬಂಗಾರದ ಬಣ್ಣದ ಕಪ್ಪೆಯ ಕಥೆಯೂ ಮುಗಿಯಿತು. ಇದನ್ನು ಅಳಿದುಹೋದ ಜೀವಿಗಳ ಪಟ್ಟಿಗೆ ಸೇರಿಸಿ ಎಂದಿತ್ತು ವಿಶ್ವಸಂಸ್ಥೆಯ 'ನಿಸರ್ಗ ಸಂರಕ್ಷಣಾ ಅಂತರರಾಷ್ಟ್ರೀಯ ಒಕ್ಕೂಟ' (ಐ.ಯು. ಸಿ.ಎನ್), 1966ರಲ್ಲಿ. ಜಗತ್ತಿಗೆ ಇದನ್ನು ವಿಜ್ಞಾನಿಗಳು ಪರಿಚಯಿಸಿದ್ದರು. 1989ರ ಮೇ 15ರಂದು ಇವು ಕೊನೆಯ ಬಾರಿಗೆ ಕಾಣಿಸಿದವು. ಆ ಲೆಕ್ಕದಲ್ಲಿ ಇವು ಅಲ್ಪಾಯು. ಈ ಮಂಡೂಕರಾಯನ ಸಾಮ್ರಾಜ್ಯ ಮಧ್ಯ ಅಮೆರಿಕದ ಕೊಸ್ಟರಿಕ, ಅದೂ ಬರಿ ಎಂಟು ಕಿ.ಮೀ. ಆವಾಸ. ಏಕೆ ಕಾಣೆಯಾದವು? ಈಗಲೂ ಆ ಕುರಿತು ಒಮ್ಮತವಿಲ್ಲ. ಸೂರ್ಯನ ಅತಿನೇರಿಳೆ ಕಿರಣಗಳು ದಾಳಿ ಮಾಡಿರಬಹುದು, ಬೂಸ್ಟ್, ರೋಗ ತಂದಿರಬಹುದು, ಸೀಮಿತ ಪ್ರದೇಶದ ಆವಾಸ ಆಹಾರ ಕೊರತೆ ಮಾಡಿರಬಹುದು ಎನ್ನುವವರಿದ್ದಾರೆ. ಇದೆಲ್ಲ ಸುಳ್ಳು, ವಾಯುಮಾಲಿನ್ಯ ಅವುಗಳನ್ನು ಕೊಂದಿದೆ ಎಂದು ಗಟ್ಟಿಯಾಗಿ ಕೂಗುವವರೇ ಹೆಚ್ಚು.

ನೀವು 'ಡೋಡೋ' ಎಂದೊಡನೆ ಪಟ್ಟನೆ ಹೇಳಿಬಿಡುತ್ತೀರಿ. ಇದರ ಕಥೆ ಎಂದೋ ಮುಗಿದುಹೋಯಿತು ಎಂದು. ಜಗತ್ತು ವಿಶಾಲವಾಗಿದೆ ಎಂದು ನಮಗನ್ನಿಸಿರಬಹುದು. ಸಾಗರ ವಿಶಾಲವಾಗಿದೆ ಎಂದು ತಿಮಿಂಗಿಲಗಳು ಭಾವಿಸಬಹುದು, ಸೈಬೀರಿಯಾದಿಂದ ಭಾರತಕ್ಕೂ

ಹೋಮೋರುಡೆಲ್ಫಿನಿಸ್, ಹೋಮೋಎರಕ್ಟಸ್ – ಹೀಗೆಲ್ಲ ನಾಲಗೆ ಹೊರಳದ ಹೆಸರುಗಳಿಂದಲೇ ಈಗಲೂ ಕರೆಯುತ್ತಾರೆ. ಮುಂದೆ ಆಫ್ರಿಕಾದಿಂದ ಹೊರಟ ಹೋಮೋಸೇಪಿಯನ್‌ಗಳು ಜಗತ್ತಿನ ಬೇರೆ ಬೇರೆ ಜಾಗಗಳಲ್ಲಿ ನೆಲೆಸಿದರು. ಉಳಿದ ಪ್ರಭೇದದ ಪ್ರಾಚೀನ ಮಾನವರನ್ನು ಎಲಿಮಿನೇಷನ್ ರೌಂಡ್‌ಗೆ ತಳ್ಳಿದರು. ಕೊನೆಗೆ ಗೆದ್ದದ್ದೂ ಈ ಪ್ರಾಣಿಯೇ. ಇದೇ ನಮ್ಮ ನಿಮ್ಮೆಲ್ಲರ ಮೂಲಪುರುಷ. ಬೇಕಾದರೆ ಇದಕ್ಕೆ ಸ್ತ್ರೀಲಿಂಗವನ್ನೂ ಸೇರಿಸಿ.

## ಧರೆಯ ಸೆರಗಲ್ಲಿ

ಈಗ ಜಗತ್ತನ್ನು ಆಳುತ್ತಿರುವ ಹೋಮೋಸೇಪಿಯನ್ ಬೇರೆ ಪ್ರಭೇದಕ್ಕೆ ಜನ್ಮ ನೀಡುವುದಿಲ್ಲ. ಇದೇ ಮುಂದುವರೆಯುತ್ತದೆ. ಕನ್ನಡಿಯಲ್ಲಿ ನಾವು ಒಮ್ಮೆ ಮುಖ ನೋಡಿಕೊಂಡಾಗ, ನಾವು ಬಡಿದಾಡಿಕೊಂಡೇ ಹಿಂದಿನ ವಂಶಸ್ಥರನ್ನು ಮಟ್ಟಹಾಕಿಯೇ, ಮೂಲೋತ್ಪಾಟನೆ ಮಾಡಿಯೇ ಮುಂದೆ ಬಂದೆವು ಎಂಬುದು ನೆನಪಾಗಬೇಕು. ಯುದ್ಧ ಮುಗಿಯಿತು, ಹೋಮೋಸೇಪಿಯನ್ ವಿಜಯಿಯಾದ. ಹತ್ತು

